ವಿಷಯ : ಬೊರ್‌ವೆಲ್ ರಿಪೇರಿ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 440 (618)

ಶ್ರೀ. ಮಂಜುನಾಥ ಸಿ. ಕುನ್ನೂರ (ಶಿಗ್ಗಾವ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು 1990-91 ರಿಂದ ಈವರೆಗೆ ಕೊರೆಯಲಾಗಿದೆ ?

2. ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕುಡಿಯುವ ನೀರಿನ ಕೊಳವೆ ಬಾವಿಗಳು ಇವೆ?

3. ಎಷ್ಟು ಬೋರವೆಲ್‌ಗಳು ದುರಸ್ತಿಯಲ್ಲಿವೆ ?

4. ಸದರಿ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

5. ಸದರಿಕೊಳವೆ ಬಾವಿಗಳನ್ನು ದುರಸ್ತಿಮಾಡಿಸಲು ಒಂದಕ್ಕೆ ಎಷ್ಟು ಹಣ ಕೊಡಲಾಗಿದೆ? ಹಾಗೂ ಈ ಮೊತ್ತವನ್ನು ಹೆಚ್ಚಿಸಲಾಗುವುದೇ ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು) :-

1. 934

2. 8134

3. 614

4. ಕೈಪಂಪು ದುರಸ್ತಿಯ ಕೆಲಸವನ್ನು ತಾಲ್ಲೂಕು ಸಂಚಾರಿ ಘಟಕದಿಂದ ತೆಗೆದು ಕೊಳ್ಳಲಾಗುವುದು. ಕಾಲಕಾಲಕ್ಕೆ ದುರಸ್ತಿ ಕೆಲಸಗಳನ್ನು ಆದ್ಯತೆ ಅನುಸಾರ ಮಾಡಲಾಗುತ್ತಿದೆ.

5. ಕೊಳವೆ ಬಾವಿ ಒಂದನ್ನು ದುರಸ್ತಿಪಡಿಸಲು 275 ರೂಪಾಯಿಗಳಂತೆ ಹಣ ಕೊಡಲಾಗಿದೆ. ಇದನ್ನು 400 ರೂಪಾಯಿಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ವಿಷಯ : ಸರ್ಕಾರದ ಭಾಷನೀತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 442 (131)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಘೋಷಿಸಿರುವ ಭಾಷಾ ನೀತಿ ಏನು ?

ಆ) ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಲ್ಲಿ ಗ್ರೂಪ್ - ಸಿ ಹುದ್ದೆಗಳಿಗೆ ಇಂಗ್ಲೀಷ್‌ನಲ್ಲಿ ಪರೀಕ್ಷೆ ಬರೆಯಲು ಸರ್ಕಾರ ಅನುಮೋದನೆ ನೀಡಿದೆಯೇ ?

ಇ) ಈ ರೀತಿ ಅನುಮೋದನೆ ನೀಡಿದಲ್ಲಿ ಸರ್ಕಾರ ಘೋಷಿಸಿರುವ ಭಾಷಾ ನೀತಿ (ಆಡಳಿತ ಭಾಷೆ)ಗೆ ಅನುಗುಣವಾಗಿದೆಯೇ ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :-

ಅ) ಸರ್ಕಾರದ ಭಾಷಾ ನೀತಿ ''ದಿ ಕರ್ನಾಟಕ ಅಫೀಶಿಯಲ್ ಲಾಂಗ್ವೇಜ್ ಆಕ್ಟ್ 1963 ರಡಿ ದಿನಾಂಕ 4-3-1980ರಲ್ಲಿ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಕನ್ನಡವನ್ನು ಸರ್ಕಾರಿ ಪತ್ರ ವ್ಯವಹಾರಕ್ಕಾಗಿ ಎಲ್ಲಾ ರಾಜ್ಯ ಸರ್ಕಾರದ ಕಚೇರಿಗಳಲ್ಲೂ ಉಪಯೋಗಿಸತಕ್ಕದ್ದು, ಆದರೆ ಇಂಗ್ಲೀಷ್ ಭಾಷೆಯನ್ನು ಕೆಳಕಂಡ ಪ್ರಕರಣಗಳಲ್ಲಿ ವ್ಯವಹರಿಸುವಾಗ ಮುಂದುವರಿಸತಕ್ಕದ್ದು.

1. ಕೇಂದ್ರ ಸರ್ಕಾರ ಇತರೆ ರಾಜ್ಯ ಸರ್ಕಾರಗಳು ಮಹಾಲೇಖಪಾಲರು ಇವರೊಂದಿಗೆ ವ್ಯವಹರಿಸುವಾಗ.